**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :8 ಸಿಡಬ್ಲು :10

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಅಜಿತ ಬಾಬನ್ನವರ |
| ತಂದೆಯ ಹೆಸರು | : ಶ್ರೀ.ಲಕ್ಷ್ಮಣ ಬಾಬನ್ನವರ |
| ವಯಸ್ಸು | : 59 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 24-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**<u>ಮುಖ್ಯ ವಿಚಾರಣೆ</u> : <u>ವಿಶೇಷ</u> <u>ಸರ್ಕಾರಿ ಅಭಿಯೋಜಕರಿಂದ</u>**

ಎಲ್ಲಾ ಆರೋಪಿತರು ನನಗೆ ಪರಿಚಯ ಇರುತ್ತಾರೆ. ಚಾಸಾಃ 1 ನನ್ನ ಅಣ್ಣ ತಮ್ಮಂದಿರಾಗಬೇಕು. ಚಾಸಾಃ 6 ರಿಂದ ಚಾಸಾಃ 8 ನನ್ನ ಸಂಬಂಧಿಕರು. ದಿನಾಂಕಃ 26-08-2017 ರಂದು ನಾವು ನಮ್ಮ ಜಾಗ 643/ಅ/ಬ 1 ಇದರಲ್ಲಿ ಬೆಳಗ್ಗೆ 9:00 ಗಂಟೆ ಸಮಾರಿಗೆ ಪಾಯ ಪೂಜೆ ಮಾಡುವ ಸಲುವಾಗಿ ಸ್ಥಳವನ್ನು ಸ್ವಚ್ಛ ಮಾಡುತ್ತಿದ್ದೇವು. ಆ ಸಮಯದಲ್ಲಿ ಚಾಸಾಃ 1 ನೇಮಿನಾಥ ಬಾಬನ್ನವರ, ಚಾಸಾಃ 7, ಚಾಸಾಃ 9 ಇನ್ನೂ 10-15 ಜನ ಇದ್ದರು. ಸ್ಥಳವನ್ನು ಸ್ವಚ್ಛ ಮಾಡಲು ಚಾಸಾಃ 14 ಮಿಲನ ದೇವನ್ನವರ, ಚಾಸಾಃ 15 ಮಲ್ಲು ಕುರಾಡೆ ಬಂದಿದ್ದರು.

2. ಮಾದರ ಸಮಾಜಕ್ಕೆ ಸೇರಿದ ಹೆಣ್ಣು ಮಕ್ಕಳು, ಗಂಡು ಮಕ್ಕಳು ಬಂದು ಇದು ಸರ್ಕಾರಿ ಜಾಗ ಇದೆ ಕಟ್ಟಡ ಏಕೆ ಕಟ್ಟುತ್ತಿದ್ದರು ಎಂದು ದಬ್ಬಾಳಿಕೆ ಮಾಡುತ್ತಿದ್ದರು, ಅವಾಚ್ಯ ಶಬ್ದಗಳಿಂದ ನಿಮ್ಮನ್ನು ಬಿಡುವುದಿಲ್ಲ ಎಂದು ಬೈಯುತ್ತಿದ್ದರು. ಅವರುಗಳ ಕೈಯಲ್ಲಿ ಕಬ್ಬಿಣದ ಸರಳುಗಳು,

ಬಂಬು ಬಡಿಗೆ ಮತ್ತು ಕಲ್ಲುಗಳು ಹಿಡಿದುಕೊಂಡು ಬಂದಿದ್ದರು. ನಾವು ನಮ್ಮ ಅಜ್ಜರ ಕಾಲದಿಂದಲೂ ಆ ಜಾಗ ನಮಗೆ ಸೇರಿದ್ದೆಂದು ನಾವು ಕಟ್ಟಡ ಕಟ್ಟುತ್ತೇವೆ ಎಂದು ಹೇಳಿದ್ದರಿಂದ ಆರೋಪಿತರು ನಮ್ಮ ಮೇಲೆ ಕಲ್ಲುಗಳಿಂದ ಹೊಡೆದರು. ಬಸಪ್ಪ ಬುರಡಿ ಅವರು ಕಬ್ಬಿಣದ ಸರಳಿನಿಂದ ಚಾಸಾಃ 7 ಅರಿಹಂತ ಅವರಿಗೆ ಕೈಗೆ ಹೊಡೆದರು. ಭೀಮಪ್ಪ ಬುರಡಿ ಅವರು ಚಾಸಾಃ 6 ಶ್ರೀಕಾಂತ ಅವರಿಗೆ ಬಂಬು ಬಡಿಗೆಯಿಂದ ಎಡಕಾಲಿಗೆ ಹೊಡೆದರು. ಉಳಿದರವರು ಕಲ್ಲುಗಳಿಂದ ಹೊಡೆಯುತ್ತಿದ್ದರು. ಚಿದಾನಂದ ಐಹೊಳೆ ಎನ್ನುವವರು ಕಲ್ಲಿನಿಂದ ಚಾಸಾಃ 8 ಪೊನ್ನಂಜಿ ಅವರ ಹಣೆಗೆ ಹೊಡೆದರು ಅದು ಕಣ್ಣಿಗೆ ಬಿತ್ತು. ಪ್ರಕಾಶ ಕಡಕೋಳ ಎನ್ನುವವರು ಜಾರಿ ಬಿದ್ದಾಗ ಈ ಘಟನೆ ಆಗಿರುತ್ತದೆ. ಚಾಸಾಃ 14 ಮಿಲನ ಅವರಿಗೂ ಸಹ ಕಲ್ಲಿಗಳಿಂದ ಏಟು ಬಿದ್ದಿತ್ತು. ನನಗೂ ಸಹ ಕಲ್ಲಿನಿಂದ ಏಟು ಬಿದ್ದಿತ್ತು.

3. ನಾನು, ರಾಮಚಂದ್ರ ಕುರಾಡೆ , ಮಲ್ಲು ಕುರಾಡೆ ಮತ್ತು ಹಣಮಂತ ಕುರಾಡೆ ಜಗಳ ಬಿಡಿಸಿ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೇವು. ಘಟನೆಯ ಬಗ್ಗೆ ಚಾಸಾಃ 1 ನೇಮಿನಾಥ ದೂರು ಕೊಟ್ಟಿದ್ದಾರೆ. ಘಟನೆ ಆದಾಗ ಬೆಳಗ್ಗೆ 11:00 ಗಂಟೆ ಆಗಿತ್ತು.

4. ನ್ಯಾಯಾಲಯದ ಮುಂದೆ ಹಾಜರುಮಾಡಿರುವ ಮು.ಮಾ.1 ರಿಂದ ಮು.ಮಾ.4 ಗಳನ್ನು ಗುರುತಿಸಿದ್ದಾರೆ. ಘಟನೆಯ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಪ್ರಕರಣವನ್ನು ಕಾಯ್ದಿರಿಸಲಾಯಿತು.

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ಪುರಸಭೆಯ ಆಡಳಿತ ಮುಖ್ಯಾಧಿಕಾರಿಯವರು ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟಬಾರದು ಎಂದು ಆದೇಶಿಸಿದ ನಂತರ ಈ ದಿನದವರೆಗೆ ಆ ಆದೇಶದ ಮೇಲೆ ಅಪೀಲು ಮಾಡಿರುವುದಿಲ್ಲ. ಈ ದಿನದವರೆಗೂ ಆ ಸ್ಥಳ ಅದೇ ಸ್ಥಿತಿಯಲ್ಲಿ ಮುಂದುವರೆಯುತ್ತಿದೆ. ವಿವಾದಿತ ಸ್ಥಳದ ಮೇಲೆ ನಮ್ಮ ಕುಟುಂಬಕ್ಕೆ ಯಾವುದೇ ರೀತಿಯ ಹಕ್ಕು ಇಲ್ಲದೇ ಇದ್ದರೂ ಸಹ ಅದು ಬೆಲೆ ಬಾಳುವ ಜಾಗ ಆಗಿದ್ದರಿಂದ ಅದನ್ನು ಪಡೆದುಕೊಳ್ಳುವ ಉದ್ದೇಶದಿಂದ ಆರೋಪಿತರ ಮೇಲೆ ಸುಳ್ಳು ಆಪಾದನೆ ಮಾಡುತ್ತಿದ್ದೇವೆ ಎನ್ನುವುದು ಸರಿಯಲ್ಲ.

2. 1 ನೇ ಆರೋಪಿ ಪುರಸಭೆ ಆಡಳಿತ ಮುಖ್ಯಾಧಿಕಾರಿಯವರನ್ನು ಕರೆದುಕೊಂಡು ಬಂದಿದ್ದು, ಸದರಿಯವರು ಸ್ಥಳದಲ್ಲಿ ಕಟ್ಟಡ ಕಟ್ಟದಂತೆ ನಮಗೆ ತಿಳಿ ಹೇಳಿದ್ದರು ಎನ್ನುವುದು ಸರಿಯಲ್ಲ, ಸಾಕ್ಷಿ ಮುಂದುವರೆದು ಸ್ಥಳಕ್ಕೆ ಯಾವುದೇ ಅಧಿಕಾರಿ ಬಂದಿರುವುದಿಲ್ಲ ಎಂದು ಹೇಳಿದ್ದಾರೆ. ಈ ಘಟನೆಗಿಂತ ಎರಡು ದಿನ ಮೊದಲು ಹಾರೂಗೇರಿ ಪೋಲಿಸರು ಶಾಂತಿ ಸಭೆ ಕರೆದಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನಾವೇ ಪೋಲಿಸ ಠಾಣೆಗೆ ಹೋಗಿ ಆಸ್ತಿಗಳನ್ನು ತೋರಿಸಲು ನಾವೇ ದಾಖಲೆಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ.

3. ಘಟನೆ ದಿನದಂದು ಕಟ್ಟಡ ಕಟ್ಟಲು ನಮಗೆ ಪುರಸಭೆ ಅವರು ಅನುಮತಿ ನೀಡಿದ್ದಾರೆ ಎಂದು ನಾವು ದಾಖಲೆಯನ್ನು ಪೋಲಿಸರಿಗೆ ನೀಡಿದ್ದೇವೆ. ಪೋಲಿಸರು ನಮಗೆ ಆಡಳಿತಾಧಿಕಾರಿಯವರು ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟದಂತೆ ಆದೇಶ ಮಾಡಿದ್ದಾರೆ ಎಂದು, ನೀವು ಸ್ಥಳದಲ್ಲಿ ಕಟ್ಟಡ ಕಟ್ಟಬಾರದು ಎಂದು ತಿಳಿ ಹೇಳಿ ಆ ಆದೇಶದ ಮೇಲೆ ನೀವು ಅಪೀಲು ಮಾಡಿಕೊಳ್ಳಿ ಎಂದು ಹೇಳಿದ್ದರು ಎನ್ನುವುದು ಸರಿಯಲ್ಲ. ಪೋಲಿಸರು ಈ ರೀತಿ

ಹೇಳಿದ ನಂತರ ಮಾದಿಗ ಸಮಾಜದವರನ್ನು ಮುಗಿಸಿಬಿಡಬೇಕು ಎಂದು ಸಂಚು ರೂಪಿಸಿ ನಾವೇ ಅವರ ಮೇಲೆ ಹಲ್ಲೆ ಮಾಡಿದೇವು ಎನ್ನುವುದು ಸರಿಯಲ್ಲ.

4. 1 ನೇ ಆರೋಪಿ ಕಬ್ಬಿಣದ ಸರಳಿನಿಂದ ಚಾಸಾಃ 7 ರವರಿಗೆ, ಭೀಮಪ್ಪ ಎನ್ನುವವರು ಚಾಸಾಃ 6 ರವರಿಗೆ, ಚಿದಾನಂದ ಎನ್ನುವವರು ಚಾಸಾಃ 8 ರವರಿಗೆ ಕಲ್ಲಿನಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಘಟನೆಯಲ್ಲಿ ನನಗೂ ಕಲ್ಲೇಟು ಬಿದ್ದು ಗಾಯ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ನಮ್ಮ ಕುಟುಂಬದವರು ರಾಜಕೀಯವಾಗಿ ಪ್ರಭಲಾಗಿದ್ದರಿಂದ ಆರೋಪಿತರ ಮೇಲೆ ನಾವೇ ದಬ್ಬಾಳಿಕೆ ಮಾಡಿದ್ದೇವೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ**

5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ವಕೀಲರು ಗೈರು ಹಾಜರಾಗಿದ್ದು, ಆ ಕಾರಣ 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.